## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

ಸಿಸಿ ನಂಃ **226 ಃ 2012**

ಪಿಡಬ್ಲೂಃ **16**

ಸಿಡ್ಲೂ ಃ **40**

ಸಾಕ್ಷಿಯ ಹೆಸರು ಃ ಮಹಾಂತಗೌಡಾ
ತಂದೆಯ ಹೆಸರು ಃ ರಾಯನಗೌಡಾ ಗೋರಬಾಳ
ವಯಸ್ಸು ಃ 77 ವರ್ಷ
ಉದ್ಯೋಗ ಃ ನಿವೃತ್ತ ಪ್ರೊಫೆಸರ್
ವಾಸ ಸ್ಥಳ ಃ ಧಾರವಾಡ

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಃಕರಿಸಿದ ದಿನಾಂಕಃ **02–03–2017**

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ನಾನು **1994** ರಿಂದ ಇಲ್ಲಿಯವರೆಗೆ ರಾಜನಗರ ಧಾರವಾಡದಲ್ಲಿ ವಾಸ ಮಾಡುತ್ತಾ ಬಂದಿರುತ್ತೇನೆ. ಸದರಿ ಇಲಾಖೆಗೆ ರಾಜನಗರ ವಸತಿ ವಿನ್ಯಾಸ ಎಂದು ಕರೆಯುತ್ತಾರೆ. ಸದರಿ ಮಹಾಂತನಗರ ವಸತಿ ವಿನ್ಯಾಸದಲ್ಲಿ ಮಹಾನಗರ ಪಾಲಿಕೆಯಿಂದ ಸಿವಿಕ ಕಮ್ಯುನಿಟಿ ಪ್ಲಾಟಗಳು ಅಸ್ತಿತ್ವದಲ್ಲಿದ್ದವು. ಈಪಗ **15** ವರ್ಷಗಳ ಹಿಂದೆ ರಸ್ತೆ ಡಾಂಬರೀಕರಣ ಆಗಿದ್ದರ ಕುರಿತು ಇಂಜನಿಯರಗಳು ಕೇಳಿದಾಗ ನಾವೆಲ್ಲಾ ಆಗಿದಾವೆ ಅಂತಾ ಹೇಳಿದ್ದೇವು. ಈ ಪ್ರಕರಣದಲ್ಲಿ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಹುಬ್ಬಳ್ಳಿ ಉಪ ನಗರ ಪೊಲೀಸ ಠಾಣೆಯಲ್ಲಿ ನಮ್ಮನ್ನು ಕರೆಯಿಸಿ ವಿಚಾರಣೆ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಈಗ ಮೇಲೆ ಹೇಳಿದ ವಿಚಾರವನ್ನೇ ನಾನು ಪೊಲೀಸರಿಗೆ ಹೇಳಿದ್ದೆ .

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣ'ಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದಃ

**2.** **2000** ಇಸ್ವಿಗಿಂತ ಒಂದು ವರ್ಷ ಹಿಂದೆ ರಾಜ ನಗರ ವಸತಿ ವಿನ್ಯಾಸದಲ್ಲಿ ಮಹಾನಗರ ಪಾಲಿಕೆ ವತಿಯಿಂದ ರಸ್ತೆಗೆ ಮೊಹರಂ ಹರಡುವುದಾಗಿ ಅಥವಾ ಕಾಮಗಾಗಿ ಆರಂಬ ಆಗಿರುವುದಿಲ್ಲ, ಅದರಂತೆ ಹೊಸ ರಸ್ತೆ ಆಗಿರುವುದಿಲ್ಲ ಎಂದು ನಾನು ನನ್ನ ವಿಚಾರಣೆಯಲ್ಲಿ ಪೊಲೀಸರ ಮುಂದೆ ಹೇಳಿದ್ದೆ ಎಂದರೆ ಸರಿಯಲ್ಲ. ಆರೋಪಿತರು

ಮಹಾನಗರ ಪಾಲಿಯನ್ನು ದುರುಪಯೋಗ ಮಾಡಿಕೊಂಡಿದ್ದರು ಎಂದು ಮಾಹಿತಿಯನ್ನು ಪೊಲೀಸರ ಮುಂದೆ ಹೇಳಿದ್ದೆ ಎಂದರೆ ಸರಿಯಲ್ಲ. ಅದರಂತೆ ಈಗ ಓದಿ ಹೇಳಿದಂತೆ ನಿಶಾನೆ ಪಿ–12 ರಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u> ಇಲ್ಲವೆಂದು ಹೇಳಿದ್ದಾರೆ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.